ಸೂತ್ರ. ಓದಿರಬೇಕಲ್ಲವಾ ನೀನು!'

'ಹಾಗಾದರೆ ಅವರವರ ಪಾಡಿಗೆ ಅವರು ಸಂಪಾದನೆ ಮಾಡಿಕೊಂಡು, ಸುಂದರವಾಗಿದ್ದರೆ ಸಾಕಾ!' ಗೀತಾ ರೇಗಿದಳು.

'ಅದೆಲ್ಲಾ ಯಾಕೆ? ನಾನು ನಿಮಗೆ ಕೊಟ್ಟ ವಸ್ತುಗಳು ನಿಮಗೆ ಇಷ್ಟ ಆಗಿವೆ ತಾನೇ? ನಿಮಗೆ ಉಪಯೋಗ ಆಗ್ತಾ ಇವೆ ತಾನೇ? ಇವೆಲ್ಲಾ ಖರೀದಿಸಬೇಕೆಂಬ ಆಸೆ ನಿಮ್ಮಲ್ಲಿ ಹುಟ್ಟಿದ್ದು ಸುಳ್ಳಲ್ಲ ತಾನೇ! ಹಾಗೆ ಖರೀದಿ ಮಾಡಬೇಕೆಂದರೆ ಕಷ್ಟ ಪಡಬೇಕು ತಾನೇ? ನಿಜಕ್ಕೆ ಇಡೀ ಪ್ರಪಂಚವನ್ನು ಒಂದು ಮಾಡಿದ್ದು ಮನೀ ಪವರ್ ತಾನೇ! ಇದನ್ನು ನಾವು ಗೌರವಿಸಬೇಕು. ನಮ್ಮನ್ನು ನಾವು ಗೌರವಿಸಿಕೊಂಡು ನಮಗಾಗಿ ನಾವು ಕಷ್ಟಪಡಬೇಕು. 'ನಾನು' ಅನ್ನುವ ಕೇಂದ್ರದ ಸುತ್ತಾ ಇಡೀ ಪ್ರಪಂಚವೇ ಸುತ್ತುವುದೆಂದು ನಿನ್ನಂಥ ಜಾಣೆಗೆ ನಾನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅನಿಸುತ್ತದೆ. ನೀನೇ ಮುಖ್ಯ, ನೀನೇ ಸಕಲ, ನೀನೇ ಸರ್ವಸ್ವ, ಸಾಕು ಮಾಡು ನಿನ್ನ ಉದ್ವೇಗ, ಹೋರಾಟ' ಹೀಗೆ ಉಪನ್ಯಾಸ ಮುಂದುವರೆಯಿತು.

ಅವನ ಚೀಲದಿಂದ ಮತ್ತಷ್ಟು ವಸ್ತುಗಳನ್ನು ತೆಗೆದುಕೊಟ್ಟ. ದೈಹಿಕ ಶ್ರಮ ಕಡಿಮೆ ಮಾಡುವಂಥವು, ಸೌಂದರ್ಯವನ್ನು ಹೆಚ್ಚಿಸುವಂಥವು.

'ನಮ್ಮ ಕೆಲಸ ಕಡಿಮೆ ಮಾಡುವ ಈ ವಸ್ತುಗಳನ್ನು ಕೊಂಡುಕೊಳ್ಳುತ್ತೇವೆ, ಸರಿ. ಉಳಿದ ಸಮಯದಲ್ಲಿ ನಮಗಿಂತ ಹೀನಾಯ ಸ್ಥಿತಿಯಲ್ಲಿರುವವರ ಬಗೆಗೆ ಯೋಚಿಸಬಹುದಾ ನೋಡಿ' ವಂದನಾ ಅಂದಳು.

'ಚೆನ್ನಾಗಿದೆ! ನಿನ್ನ ಬಿಡುವು, ನಿನ್ನಿಷ್ಟ. ಅದು ನಿನ್ನ ವಿಶ್ರಾಂತಿಗಾಗಿ. ಇಗೋ ಈ ಪೆಟ್ಟಿಗೆ ನಿನಗೆ. ಇದರಲ್ಲಿ ನೀನು ನೋಡಲು ಬೇಕಾದಷ್ಟು ಧಾರಾವಾಹಿಗಳು ಸಿಗುತ್ತವೆ. ಮಿದುಳಿಗೆ ಹೆಚ್ಚು ಕೆಲಸ ಕೊಡಬೇಡ. ಸುಸ್ತಾಗುತ್ತೀಯ. ಅಷ್ಟಕ್ಕೂ ಮಿದುಳಿನಿಂದ ನಿನಗೇನು ಕೆಲಸ? ದಿನದ ಕೆಲಸವೆಲ್ಲಾ ಯಾಂತ್ರಿಕವಾಗಿ ಮುಗಿದು ಹೋಗಲಿ! ಇಗೋ ನಿನಗೆ ಬೇಕಾದ ಯಂತ್ರಗಳು. ನಂತರ ವಿರಮಿಸು! ನಿನಗಾಗಿ ಯೋಚನೆ ಮಾಡಲು ನಾನು ಇದ್ದೀನಲ್ಲವಾ! ನೀವೆಲ್ಲಾ ನನ್ನ ಸೋದರ ಸೊಸೆಯರು. ನಾನು ಹೇಳಿದ ಹಾಗೆ ಕೇಳಿ'

ಹುಡುಗಿಯರ ತಲೆ ಗಿರ್ರನೆ ಸುತ್ತುತ್ತಾ ಇತ್ತು. 'ಒಬ್ಬಾಕೆ ಝಾನ್ಸಿಲಕ್ಷ್ಮಿಯನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು' ಅಂದುಬಿಟ್ಟಳು.

'ಆಕೆಯ ಅಪ್ಪ ಆಕೆಯ ಅಮ್ಮನ ಕತ್ತಿಗೆ ಮೊಳೆ ಹೊಡೆದ ಮಾತ್ರಕ್ಕೆ ಅದು ಎಲ್ಲರಿಗೂ ಅನ್ವಯಿಸುವುದಿಲ್ಲವಲ್ಲ? ನಮ್ಮಪ್ಪ ತುಂಬಾ ಒಳ್ಳೆಯವ. ನನಗೆ ಸಾಕಷ್ಟು ಒಡವೆ ಕೊಡಿಸಿದ' ಮತ್ತೊಬ್ಬಾಕೆ ದನಿ ಕೂಡಿಸಿದಳು.

'ಹೌದು. ಈ ಸಮಸ್ಯೆಗಳ ಬಗ್ಗೆ ನಾವು ಯಾಕೆ ತಲೆ ಕೆಡಿಸಿಕೊಳ್ಳಬೇಕು? ಅದಕ್ಕಾಗಿ ರಾಜಕಾರಣಿಗಳು ಇದಾರೆ. ನಾವೇನೂ ಮಾಡಾಕಾಗಲ್ಲ. ರಾಜಕಾರಣ ನಮಗೆ ಬೇಕಾಗಿಲ್ಲ. ಅದು ನಮ್ಮ ಬದುಕಿನ ಭಾಗವಲ್ಲ. ಅದೆಲ್ಲಾ ನೋಡಿಕೊಳ್ಳಲು ಬೇರೆಯವರಿದ್ದಾರೆ. ಕಾಲ ಬದಲಾಗಿದೆ. ನಾವೂ ಬದಲಾಗಬೇಕು. ಇವನೇ ನಮ್ಮ ಗುರು, ಸ್ನೇಹಿತ'.

ಅವನು ಬಂದ ಕೆಲಸ ಮುಗಿಯಿತು. ಚೀಲ ಜಾಡಿಸಿ ಹೆಗಲಿಗೆ ಹಾಕಿ ಮಂತ್ರವಾದ್ಯ ತೆಗೆದು ನುಡಿಸುತ್ತಾ ಮುಂದೆ ನಡೆದ. ಮಾಳಿಗೆಯಿಂದ, ಹಂಚಿನ ಮನೆಯಿಂದ, ಗುಡಿಸಲಿನಿಂದ, ಹುಡುಗಿಯರು ಕಿಂದರಿಜೋಗಿಯ ಬೆನ್ನು ಹತ್ತಿದ ಇಲಿಗಳ ಹಾಗೆ ಕೆಂಪು ಮನುಷ್ಯನ ಬೆನ್ನು ಹತ್ತಿದರು.

'ನೀವೆಲ್ಲಾ ನನ್ನೊಟ್ಟಿಗೆ ಮಂತ್ರನಗರಿಗೆ ಬರುತ್ತೀರಾ?' ಹೊಳೆಯುವ ಕಣ್ಣುಗಳಿಂದ ಕೇಳಿದ.

'ಬರುತ್ತೇವೆ – ಆದರೆ ವಾಪಸು ಬರಲಾಗದೇ ನಮಗೆ ನಮ್ಮ ಊರು, ಜಮೀನು, ಹಸಿರು, ಅಮ್ಮ ನೆನಪಾಗಿ ದಿಗಿಲಾದರೆ ಏನು ಮಾಡುವುದು?'

'ಅದಕ್ಕೇನು! ಭಯ, ದಿಗಿಲು, ಅಭದ್ರತಾ ಭಾವವನ್ನು ಮರೆಯುವಂತೆ ಮಾಡುವುದೇ ಧರ್ಮ. ಹಾಯಾಗಿ ದೇವರ ಅರಾಧನೆ ಮಾಡಿಕೊಳ್ಳಿ. ಪೂಜೆ ಮಾಡಿಕೊಳ್ಳಿ. ನಿಮ್ಮ ಊರಿನ ಖಾದ್ಯಗಳನ್ನು ಮಾಡಿಕೊಂಡು ತಿನ್ನಿ. ಗುಡಿ ಗೋಪುರ ನಿರ್ಮಿಸಿಕೊಳ್ಳಿ'

ಅಂದು ಹಿಂದಕ್ಕೆ ತಿರುಗಿ ನೋಡದೇ ಮುಂದೆ ಸಾಗುತ್ತಾ ಇದ್ದ ಹುಡುಗಿಯರು ಅವನ ಹಿಂದೆ ಓಡುತ್ತಿದ್ದರು. ಹೂವಿನ ಗಿಡ ತುಳಿಯುತ್ತಾ, ಅನಸೂಯಾಳ ಸಮಾಧಿಯ ಮೇಲಿಂದ, ಕೃಷ್ಣವೇಣಿಯ ಸಮಾಧಿಯ ಮೇಲಿನಿಂದ, ದಂಗಾಗಿ ನೋಡ್ತಾ ಇದ್ದ ಝಾನ್ಸಿಲಕ್ಷ್ಮಿಯ ಕಣ್ಣ ಮುಂದಿನಿಂದ –

ಕಥೆ ಅಮೆರಿಕಕ್ಕೆ, ಫ್ರೈಡ್ ಚಿಕನ್‌ಗೆ, ನಾವು ಎಲ್ಲಿಗೊ ಗೊತ್ತಿಲ್ಲ. ●